ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ
ನ್ಯಾಯಾಲಯ, ತಿಪಟೂರು

ಸಿ.ಸಿ. ನಂ. **650/2018** ಪಿ.ಡಬ್ಲ್ಯೂ: **1**

ದಿಃ **17.08.2021** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು ಆರೋಪಿ ಪರ ಶ್ರೀ **BDJ** ವಕೀಲರಿಂದ</u>

ನಾನು ಕೊಬ್ಬರಿಯ ಕವಟು ಮತ್ತು ಚೂರಿನ ವ್ಯಾಪಾರ ಮಾಡುತ್ತೇನೆ. ಶ್ರೀ ಸಾಯಿ ಟ್ರೇಡರ್ಸ್ ಎಂಬ ಹೆಸರಿನಲ್ಲಿ ನಾನು ವ್ಯಾಪಾರ ಮಾಡುತ್ತಿದ್ದೇನೆ. ಸದರಿ ನನ್ನ ಸಂಸ್ಥೆ ನೊಂದಣಿಯಾಗಿರುತ್ತದೆ. ಆ ಬಗ್ಗೆ ನೊಂದಣಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ಎಪಿಎಂಸಿ ಯಾರ್ಡಿನಲ್ಲಿ ವ್ಯಾಪಾರ ಮಾಡುತ್ತೇನೆ. ಆ ರೀತಿ ವ್ಯಾಪಾರ ಮಾಡಲು ನಾನು ಪರವಾನಿಗೆ ಪಡೆದುಕೊಂಡಿರುತ್ತೇನೆ. ಆದರೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು 4 ವರ್ಷಗಳಿಂದ ಟ್ರೇಡರ್ ಆಗಿ ಕೆಲಸ ಮಾಡುತ್ತಿರುತ್ತೇನೆ. ಯಾರಾದರೂ ಕೊಬ್ಬರಿ ಕವಟು ಮತ್ತು ಚೂರು ಬೇಕೆಂದು ಕೇಳಿದಾಗ ನಾನು order place ಮಾಡುತ್ತೇನೆ.

ಆರೋಪಿತರು ಎಷ್ಟು ಕೊಬ್ಬರಿ ಕವಟು ಮತ್ತು ಚೂರು ಬೇಕೆಂದು ಕೇಳಿರುತ್ತಾರೆಂಬ ಬಗ್ಗೆ ನಾನು ದಾಖಲೆ ಹಾಜರು ಪಡಿಸಿರುವುದಿಲ್ಲ, ಕಾರಣ ಅವರು ನನ್ನ ಬಳಿ ಖುದ್ದಾಗಿ ಬಂದು ಮೌಖಿಕವಾಗಿ ಕೇಳಿರುತ್ತಾರೆ. ಆರೋಪಿತರಿಗೆ ಎಷ್ಟು ಕೊಬ್ಬರಿ ಮತ್ತು ಚೂರು ಕೊಟ್ಟ ಬಗ್ಗೆ ಎಪಿಎಂಸಿ ರಶೀದಿಗಳು ಹಾಗೂ GST ಬಿಲ್ ಹಾಗೂ Invoice ದಾಖಲೆಗಳು ಇರುತ್ತವೆ. ಆರೋಪಿತರು ಸಹ ಎಪಿಎಂಸಿ ಆವರಣದಲ್ಲಿ ಕೊಬ್ಬರಿ ಕವಟು ಮತ್ತು ಚೂರಿನ ವ್ಯಾಪಾರ ಮಾಡುತ್ತಾರೆ. ನಾನು

ಆರೋಪಿತರಿಗೆ ಕೊಬ್ಬರಿ ಕವಟು ಮತ್ತು ಚೂರನ್ನು ನೀಡಿದ್ದ ಬಗ್ಗೆ ನಿ ಪಿ 14 ಮತ್ತು 15 ರಲ್ಲಿ ಆರೋಪಿತರ ಸಹಿ ಪಡೆದಿರುವುದಿಲ್ಲ. ದಿಃ 28.05.2018 ರಲ್ಲಿ ನಾನು ಆರೋಪಿತರಿಗೆ ಸುಮಾರು 8 ಲಕ್ಷ ಹಾಗೂ 9 ಲಕ್ಷ ಚಿಲ್ಲರೆ ಮೌಲ್ಯದ ಕೊಬ್ಬರಿ ಕವಟು ಮತ್ತು ಚೂರನ್ನು ವ್ಯಾಪಾರ ಮಾಡಿರುತ್ತೇನೆ. ನಿ ಪಿ 14 ಮತ್ತು 15 ರ ಮೂಲ ಪ್ರತಿ ಆರೋಪಿತರ ಬಳಿ ಇರುತ್ತದೆ . ನಿ ಪಿ 14 ಮತ್ತು 15 ಕ್ಕೆ ಆರೋಪಿತರ ಸಹಿ ಪಡೆಯಬೇಕೆಂಬ ನಿಯಮ ಇರುವುದಿಲ್ಲ. ನಿ ಪಿ 14 ಮತ್ತು 15 ರಲ್ಲಿ Whitener ಹಾಕಿ ತಿದ್ದುಪಡಿ ಮಾಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು Printing ನಲ್ಲಿ ತಪ್ಪಾಗಿದ್ದುದರಿಂದ ತಿದ್ದುಪಡಿ ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ ದಿಃ 28.05.2018 ರಂದು ನಾನು ನಿ ಪಿ 14 ಮತ್ತು ಶ 15 ರ ಪ್ರಕಾರ ಆರೋಪಿತರಿಗೆ ಸದರಿ ಕೊಬ್ಬರಿ ಮತ್ತು ಚೂರನ್ನು ವ್ಯಾಪಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಬಿಲ್ ಪುಸ್ತಕದಲ್ಲಿ ಕ್ರಮ ಸಂಖ್ಯೆ ನಮೂದಿಸಲಾಗಿರುತ್ತದೆ ಎಂದರೆ ಸರಿ . ನಿಪಿ 14 ಮತ್ತು 15 ಕ್ಕೆ ಸಂಬಂದ ಪಟ್ಟ ಬಿಲ್ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಆರೋಪಿತರ ಜೊತೆ ಯಾವುದೇ ವ್ಯಾಪಾರ ಮಾಡದೇ ಇರುವುದರಿಂದ ನಿ ಪಿ 14 ಮತ್ತು 15 ನ್ನು ಸೃಷ್ಟಿಸಿ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ ಸಾಮಾನ್ಯವಾಗಿ ಎಪಿಎಂಸಿ ಯಾರ್ಡಿನ ನಿಯಮಾವಳಿಯಂತೆ ವ್ಯಾಪಾರ ಮಾಡಬೇಕೆಂದರೆ ಸರಿ . ವ್ಯಾಪಾರ ಮಾಡುವಾಗ ಯಾವುದೇ ತಪ್ಪು ಆದಲ್ಲಿ ಅದನ್ನು ಎಪಿಎಂಸಿ ಅಧಿಕಾರಿಗಳ ಗಮನಕ್ಕೆ ತರಬೇಕೆಂದರೆ ಸರಿ. ಸದರಿ ಸಮಸ್ಯೆಯನ್ನು APMC ಕಮಿಟಿಗೆ ಕಳುಹಿಸಲಾಗುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಮಾಡಿದ ವ್ಯಾಪಾರದ ಹಣವನ್ನು ನನಗೆ ನೀಡಿಲ್ಲವೆಂದು ಹೇಳಿ ನಾನು ಎಪಿಎಂಸಿ ರವರ ಗಮನಕ್ಕೆ ತಂದಿರುತ್ತೇನೆ. ಈ ಪ್ರಕರಣ ದಾಖಲಿಸಲು

ಎಪಿಎಂಸಿ ರವರ ಅನುಮತಿ ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಎಪಿಎಂಸಿ ಕಾರ್ಯದರ್ಶಿಯವರ ಗಮನಕ್ಕೆ ತಂದು, ಆ ಬಗ್ಗೆ ಅರ್ಜಿ ನೀಡಿ, ಅದಕ್ಕೆ ಅವರಿಂದ ಸಹಿ ಪಡೆದಿರುತ್ತೇನೆ. ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. 2018-19 ರಲ್ಲಿ ನಾನು ಆದಾಯ ತೆರಿಗೆ ಪಾವತಿಸಿರುತ್ತೇನೆ. ಆರೋಪಿತರು ನನಗೆ ಕೊಬ್ಬರಿ ವ್ಯಾಪಾರ ಬಾಬ್ತು ಬಾಕಿ ಹಣ ಕೊಡದಿರುವ ವಿಚಾರವಾಗಿ ಸದರಿ ಆದಾಯ ತೆರಿಗೆ ವಿವರಣೆಯಲ್ಲಿ ನಮೂದಿಸಿರುತ್ತೇನೆ. ಯಾವುದೆ ಆದಾಯ ತೆರಿಗೆ ಪಾವತಿ Assessment ಆಗಬೇಕಾದರೆ ಒಂದು ವರ್ಷದ ಸ್ಟೇಟ್ ಮೆಂಟ್ ಆಗಬೇಕು ಎಂದರೆ ಸರಿ. ದಿಃ 01.04.2018 ರಿಂದ 28.05.2018 ರ ವರೆಗಿನ ಆದಾಯ ತೆರಿಗೆ ದಾಖಲೆಗಳನ್ನು ಮಾತ್ರವೆ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆಂದರೆ ಸರಿ. ನಾನು ನಿ ಪಿ -13 ನ್ನು ಸೃಷ್ಟಿಸಿ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡಿದ ಮೇಲೆ ಸದರಿ ಅಧಿಕಾರಿಗಳಿಂದ ದಾಖಲೆ ತಂದು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ, ಕಾರಣ ಕೋವಿಡ್ ಇದ್ದುದರಿಂದ ಸದರಿ ದಾಖಲೆಯನ್ನು ಪಡೆಯಲು ಸಾಧ್ಯವಾಗಿರುವುದಿಲ್ಲ. ದಿಃ 28.05.2018 ರ ನಂತರ ನನ್ನ ಮತ್ತು ಆರೋಪಿತರ ನಡುವೆ ಯಾವುದೆ ವ್ಯಾಪಾರ ನಡೆದಿರುವುದಿಲ್ಲ. ಈ ಪ್ರಕರಣದಲ್ಲಿ ನಮೂದಿಸಿದ ದಿನಾಂಕದ ಸುಮಾರು 3-4 ವರ್ಷಗಳ ಹಿಂದಿನಿಂದಲೂ ನಾನು ಆರೋಪಿತರೊಂದಿಗೆ ವ್ಯಾಪಾರ ಮಾಡುತ್ತಿದ್ದೆ.

ಸಿ.ಸಿ. ನಂ. **650/18** ಪಿ.ಡಬ್ಲ್ಯೂ: **1**

ನಿ ಪಿ - 1 ರ ಚೆಕ್ ನಲ್ಲಿ ನಿಪಿ-1(ಎ) 2 ನೇ ಆರೋಪಿಯ ಸಹಿ ಇರುತ್ತದೆ. ನಿಪಿ-1 ಎ ಸಹಿಗೂ ಮತ್ತು ಚೆಕ್ ನಲ್ಲಿರುವ ಇತರೆ ಬರವಣಿಗೆಗಳಲ್ಲಿ ವ್ಯತ್ಯಾಸವಿರುತ್ತದೆ ಎಂದರೆ ಸಾಕ್ಷಿಯು ಸದರಿ ಚೆಕ್ ನ್ನು ಆರೋಪಿತರೇ ಕೊಟ್ಟಿರುವುದರಿಂದ ನನಗೆ ಯಾರು ಬರೆದಿರುತ್ತಾರೆಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ನನಗೆ ನಿ ಪಿ 1 ಚೆಕ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಸಹಿಯನ್ನು ನಾನು ದುರುಪಯೋಗ ಪಡಿಸಿಕೊಂಡು ನಿ ಪಿ 1 ಚೆಕ್ ನ್ನು ಸೃಷ್ಟಿಸಿ ತಂದು ಹಾಜರು ಪಡಿಸಿರುತ್ತೇನೆ ಎಂದರ ಸರಿಯಲ್ಲ. ದಿಃ 28.05.2018 ರಂದು ನನ್ನ ಮತ್ತು ಆರೋಪಿತರ ನಡುವೆ ಯಾವುದೇ ವ್ಯಾಪಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿತರಿಗೆ ಹಣ ಪಾವತಿಸುವಂತೆ ನೋಟೀಸು ನೀಡಿರುತ್ತೇನೆ, ಆದರೆ ಅದರ ದಿನಾಂಕ ನನಗೆ ನೆನಪಿರುವುದಿಲ. ನಾನು ಆರೋಪಿತರಿಗೆ ನೀಡಿದ ನೋಟೀಸ್ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಎಪಿಎಂಸಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಾನು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ ಆರೋಪಿತರು ನನಗೆ ಯಾವುದೇ ಹಣ ಬಾಕಿ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**Sd/-**
ಹಿರಿಯ ಸಿವಿಲ್ ನ್ಯಾಯಾಧೀಶರು, ತಿಪಟೂರು.